**Online at:** https://researchtrendsjournal.com **ISSN No:** 2584-282X
**Indexed Journal** **Peer Reviewed Journal**




**INTERNATIONAL JOURNAL OF TRENDS IN EMERGING RESEARCH AND DEVELOPMENT**

**Volume 3; Issue 6; 2025; Page No. 55-59**

**Received:** 11-08-2025
**Accepted:** 17-09-2025
**Published:** 13-11-2025

# 'ಭರತೇಶ ವೈಭವ' ದಲ್ಲಿ ಭರತನ ಸಂಯಮ

**ಡಾ. ಮಂಜುನಾಥ ಎಂ ಎಂ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿ ನಗರ, ಶಿವಮೊಗ್ಗ, ಕರ್ನಾಟಕ, ಭಾರತ

**DOI:** https://doi.org/10.5281/zenodo.17919226

**Corresponding Author:** ಡಾ. ಮಂಜುನಾಥ ಎಂ ಎಂ

**Abstract**

ಈ ಲೇಖನದಲ್ಲಿ 16ನೇ ಶತಮಾನದ ಜೈನಕವಿ ರತ್ನಾಕರವರ್ಣಿಯವರ ಜೀವನ, ಸಾಹಿತ್ಯಸಾಧನೆ ಹಾಗೂ ಭರತೇಶ ವೈಭವ ಕಾವ್ಯದಲ್ಲಿರುವ ಮೌಲ್ಯಚಿಂತನೆಯನ್ನು ವಿಶ್ಲೇಷಿಸಲಾಗಿದೆ. ವೀಣುಪುರದಲ್ಲಿ ಜನಿಸಿದ ರತ್ನಾಕರವರ್ಣಿ ಕಾರ್ಕಳದ ಭೈರರಸನ ಆಶ್ರಯ ಪಡೆದ ಕವಿ. ಜೈನಧರ್ಮದ ಮೌಲ್ಯಗಳನ್ನು ಉತ್ತೇಜಿಸಿದರೂ ಜನಸಾಮಾನ್ಯರಿಗೆ ಗ್ರಾಹ್ಯವಾಗುವ ರೀತಿಯಲ್ಲಿ ಸಾಂಗತ್ಯ ರೂಪದಲ್ಲಿ ಭರತೇಶ ವೈಭವವನ್ನು ರಚಿಸಿರುವುದು ಕನ್ನಡ ಸಾಹಿತ್ಯದಲ್ಲಿ ಮಹತ್ತರ ಸಾಧನೆಯಾಗಿದೆ. ಈ ಕೃತಿಯಲ್ಲಿ ಭರತನ ಜೀವನ, ರಾಜಧರ್ಮ, ಕುಟುಂಬಧರ್ಮ, ತ್ಯಾಗ, ಸಂಯಮ, ಶಿಸ್ತು, ಸಮತೋಲನ, ಪರಾಕ್ರಮ ಇತ್ಯಾದಿ ಮೌಲ್ಯಗಳು ಸುಂದರವಾಗಿ ಬಿಂಬಿತವಾಗಿವೆ.
ಲೇಖನವು ವಿಶೇಷವಾಗಿ ಸಂಯಮ ಎಂಬ ಕೇಂದ್ರ ಮೌಲ್ಯವನ್ನು ವಿಶ್ಲೇಷಿಸುತ್ತದೆ. ಪಂಪ, ವಚನಕಾರರು, ಕೀರ್ತನೆಕಾರರು ಚಿತ್ರಿಸಿದ ಸಂಯಮದ ತತ್ವವನ್ನು ಹೋಲಿಕೆ ಮಾಡಿ, ಭರತೇಶನ ಸಂಯಮ ಹೇಗೆ ವ್ಯಕ್ತಿತ್ವದ ಮಹೋನ್ನತಿಯನ್ನು ತೋರಿಸುತ್ತದೆ ಎಂಬುದನ್ನು ವಿವರಿಸುತ್ತದೆ. ಕರ್ತವ್ಯನಿಷ್ಠೆ, ವಿಷಾದ-ಹರ್ಷಗಳಲ್ಲಿ ಸಮಚಿತ್ತತೆ, ಕುಟುಂಬವಿಯೋಗದ ಸಂದರ್ಭದಲ್ಲಿನ ಸ್ಥೈರ್ಯ, ವಿವಾದ-ಕ್ರೋಧ ನಿವಾರಣೆಯಲ್ಲಿ ಪ್ರಜ್ಞಾಪೂರ್ವಕ ಸಮಾಧಾನ—ಇವೆಲ್ಲ ಭರತನ ಸಂಯಮಶಕ್ತಿಯನ್ನು ಒತ್ತಿ ಹೇಳುತ್ತವೆ.
ಅಂತಿಮವಾಗಿ, ಭರತೇಶನ ಸಂಯಮದ ಮೂಲಕ ರತ್ನಾಕರವರ್ಣಿ ಮಾನವ ಜೀವನಕ್ಕೆ ಅನ್ವಯಿಸುವ ನೈತಿಕ ಸಂದೇಶವೊಂದನ್ನು ಸಾರುತ್ತಾನೆ: ಜೀವನದಲ್ಲಿ ಯಾವುದೇ ಸಂದರ್ಭದಲ್ಲಿ ಸಮತೋಲನ, ಸಹನೆ ಮತ್ತು ತಾಳ್ಮೆಯನ್ನು ಕಳೆದುಕೊಳ್ಳದಿರುವುದೇ ನಿಜವಾದ ಜಯ.

**Keywords:** ರತ್ನಾಕರವರ್ಣಿ, ಭರತೇಶ ವೈಭವ, ಜೈನಸಾಹಿತ್ಯ, ಸಂಯಮ, ಕನ್ನಡ ಮಧ್ಯಕಾಲೀನ ಸಾಹಿತ್ಯ, ಸಾಂಗತ್ಯ, ಭರತ ಚಕ್ರಿ, ಮೌಲ್ಯಚಿಂತನೆ, ಶಿಸ್ತು–ಸಮತೋಲನ, ಪಂಪ, ವಚನಸಾಹಿತ್ಯ

## Introduction

ಕುಮಾರವ್ಯಾಸ ಯುಗದ ಹಿರಿಯ ಕವಿಗಳಲ್ಲಿ ರತ್ನಾಕರವರ್ಣಿಯೂ ಒಬ್ಬ. ಈತನ ಕಾಲ ೧೬ನೆಯ ಶತಮಾನ. ಪಶ್ಚಿಮ ಕರಾವಳಿಯ ಮೂಡಬಿದ್ರೆ ಇವನ ಜನ್ಮಸ್ಥಳ. ಇದರ ಹಿಂದಿನ ಹೆಸರು ವೇಣುಪುರ. ತಂದೆ ದೇವರಾಜ.ತಾಯಿಯ ವಿವರ ತಿಳಿದು ಬಂದಿಲ್ಲ. ರತ್ನಾಕರ ವಿಜಯನಗರ ಅರಸರ ಸಾಮಂತರಾಜನಾದ ಕಾರ್ಕಳದ ಭೈರರಸನ ಆಸ್ಥಾನದ ಕವಿಯಾಗಿದ್ದನೆಂದು ತಿಳಿದು ಬಂದಿದೆ. ಈತನಿಗೆ ದೀಕ್ಷೆ ನೀಡಿದ ಗುರು ಚಾರುಕೀರ್ತಿ ಆಚಾರ್ಯ, ಮೋಕ್ಷಗುರು ಹಂಸನಾಥನೆಂದು ಗುರುತಿಸಲಾಗಿದೆ. ರತ್ನಕ್ಕೆ ಆಕರವಾದ ಸಮುದ್ರದ ಬಣ್ಣವುಳ್ಳ ರತ್ನಾಕರನಿಗೆ 'ಶೃಂಗಾರ ಕವಿ' 'ರತ್ನಾಕರ ಸಿದ್ಧ' ಎಂಬ ಬಿರುದುಗಳಿದ್ದವೆಂದು ಗುರುತಿಸಲಾಗಿದೆ.

೧೫೬೭ರಲ್ಲಿ ಬರೆದಿರುವ ಭರತೇಶ ವೈಭವ ಮಧ್ಯಕಾಲೀನ ಕನ್ನಡ ಸಾಹಿತ್ಯದ ಒಂದು ಶ್ರೇಷ್ಠ ಕೃತಿ. ರತ್ನಾಕರವರ್ಣಿ ರಚಿಸಿರುವ ಮೇರುಕೃತಿ. ಸಾಂಗತ್ಯ ರೂಪದಲ್ಲಿರುವ ಭರತೇಶ ವೈಭವ ಕನ್ನಡದ ಅನನ್ಯ ಕೃತಿ. ಎಂಬತ್ತು ಸಂಧಿ, ಹತ್ತು ಸಾವಿರ ಸಾಂಗತ್ಯಗಳನ್ನುಳ್ಳ ಈ ಕಾವ್ಯ ಕೃತಿಯನ್ನು ಒಂಬತ್ತು

ತಿಂಗಳಲ್ಲಿ ಬರೆದಿದ್ದಾನೆಂದು ವಿದ್ವಾಂಸರು ಗುರುತಿಸಿದ್ದಾರೆ. ಭೋಗ ವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕವಿಜಯ, ಮತ್ತು ಮೋಕ್ಷ ವಿಜಯ ಎಂಬ ಐದು ವಿಜಯಗಳಲ್ಲಿ ಭರತೇಶನ ಕತೆಯನ್ನು ಹೇಳಿದ್ದಾನೆ.

ಸುಮಾರು ಎರಡು ಸಾವಿರ ವರ್ಷಗಳ ದೀರ್ಘವಾದ ಇತಿಹಾಸವನ್ನು ಹೊಂದಿರುವ ಕನ್ನಡ ಭಾಷೆಯನ್ನು ವಿದ್ವಾಂಸರು ಅಧ್ಯಯನದ ಅನುಕೂಲಕ್ಕೋಸ್ಕರ ಕೆಲವು ವಿಧಗಳಾಗಿ ವರ್ಗೀಕರಿಸಿದ್ದಾರೆ. ಪೂರ್ವದ ಹಳಗನ್ನಡ, ಹಳಗನ್ನಡ, ಮಧ್ಯಕಾಲೀನ ಕನ್ನಡ ಮತ್ತು ಹೊಸಗನ್ನಡ ಎಂದು ಗುರುತಿಸಲಾಗಿದೆ ಪೂರ್ವದ ಹಳಗನ್ನಡ ಕಾಲಘಟ್ಟದಲ್ಲಿ ಅಸಗ ಗುಣನಂದಿ, ಗುಣವರ್ಮ ಎಂಬ ಹೆಸರಿನ ಕವಿಗಳಿದ್ದರೂ ಕೂಡ ಅವರು ರಚಿಸಿರುವ ಯಾವುದೇ ಸಾಹಿತ್ಯ ಕೃತಿಗಳು ನಮಗೆ ಪೂರ್ಣಪ್ರಮಾಣದಲ್ಲಿ ದೊರೆತಿಲ್ಲ. ಕನ್ನಡದಲ್ಲಿ ದೊರೆತ ಮೊದಲ ಕಾವ್ಯವೆಂದರೆ ಅದುವೇ ಆದಿಪುರಾಣ, ಕರ್ತೃ ಪಂಪ ಆದ್ದರಿಂದ ಪಂಪನನ್ನು ಕನ್ನಡದ ಆದಿಕವಿ ಎಂದೇ ಕರೆಯಲಾಗಿದೆ. ಪಂಪನ ಕಾಲಘಟ್ಟ ಅಂದರೆ ಹತ್ತನೆಯ ಶತಮಾನದಲ್ಲಿ ಸಂಸ್ಕೃತದ ಪ್ರಭಾವ ವಿಶೇಷವಾಗಿತ್ತು. ರಾಜಾಶ್ರಯ ಪಡೆದ ಅಂದಿನ ಕವಿಗಳು ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿ ರಾಜರನ್ನು ಮತ್ತು ಪಂಡಿತ ಮಂಡಳಿಯನ್ನು ಮೆಚ್ಚಿಸಬೇಕಾಗಿತ್ತು. ಈ ಕಾರಣದಿಂದ ಮಾರ್ಗಶೈಲಿಯಲ್ಲಿ ಅಂದರೆ ಚಂಪೂ ಶೈಲಿಯಲ್ಲಿ ಕಾವ್ಯ ಕೃತಿಗಳನ್ನು ರಚಿಸಿದರು ಆದರೆ ಇವರ ಕೃತಿಗಳು ಉತ್ಕೃಷ್ಟ ಕೃತಿಗಳೆಂದು ಹೆಸರು ಪಡೆದರೂ ಕೂಡ ಜನಸಾಮಾನ್ಯರನ್ನು ತಲುಪಲಿಲ್ಲ ಜನಸಾಮಾನ್ಯರ ಪಾಲಿಗೆ ಇವು ಕಬ್ಬಿಣದ ಕಡಲೆಯಾಗಿದ್ದವೆಂದೇ ತಿಳಿಯಲಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಆದ ಸಾಮಾಜಿಕ ಕ್ರಾಂತಿ ವಿಶಿಷ್ಟವಾದುದು. ಕಡೆಗಣಿಸಲ್ಪಟ್ಟಿದ್ದ ಜನಸಾಮಾನ್ಯರನ್ನು ಪ್ರಧಾನವಾಗಿಟ್ಟುಕೊಂಡು ಸುಲಭವಾಗಿ ಅರ್ಥವಾಗುವ ಹಾಗೆ ವಚನ ಸಾಹಿತ್ಯವನ್ನು ರಚಿಸಲಾಯಿತು ಆದರೂ ಸಹ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅನುಪಮ ಕೊಡುಗೆ ನೀಡಿದ ಶ್ರೇಯಸ್ಸು ಜೈನಧರ್ಮದ ಕವಿಗಳಿಗೆ ಸಲ್ಲುತ್ತದೆ.

ಜೈನನಾದ ರತ್ನಾಕರವರ್ಣಿ ಜೈನ ಧರ್ಮ ವನ್ನು ಎತ್ತಿಹಿಡಿದಿದ್ದರೂ ಕೂಡ ಜನಸಾಮಾನ್ಯರನ್ನು ಕಡೆಗಣಿಸಲಿಲ್ಲ. ಅವರಿಗೆಲ್ಲ ಸುಲಭವಾಗಿ ಗ್ರಾಹ್ಯವಾಗುವ ಹಾಗೆ ಆದಿನಾಥನ ಹಿರಿಯ ಮಗನಾದ ಭರತನನ್ನು ನಾಯಕನನ್ನಾಗಿ ಮಾಡಿಕೊಂಡು ಸಾಂಗತ್ಯದಲ್ಲಿ ಭರತೇಶ ವೈಭವ ಕಾವ್ಯ ಕೃತಿಯನ್ನು ರಚಿಸಿರುವುದು ಸಾಹಿತ್ಯ ಲೋಕದಲ್ಲಿ ಆತನ ಹೆಸರನ್ನು ಚಿರಸ್ಥಾಯಿಯಾಗಿಸಿದೆ.

ಭರತೇಶ ವೈಭವದಲ್ಲಿ ರತ್ನಾಕರವರ್ಣಿ ಹಲವು ಪ್ರಧಾನ ವಿಷಯಗಳ ಮೂಲಕ ಸಂದೇಶ ನೀಡಿದ್ದಾನೆ. ಭರತನ ವೈಭವ, ಜೀವನ ನಿರ್ವಹಣೆ, ಪತ್ನಿಯರು-ಪ್ರಜೆಗಳನ್ನು ನೋಡಿಕೊಳ್ಳುವ ರೀತಿ -ನೀತಿ, ರಾಜ್ಯಭಾರದ ಕ್ರಮ, ಶಿಸ್ತು, ಸಂಯಮ, ತ್ಯಾಗ ಭೋಗ ಪರಾಕ್ರಮ, ಸಾಹಸ ಹಿರಿಯರಿಗೆ ನೀಡುವ ಗೌರವ. ಕಿರಿಯರನ್ನು ಪ್ರೀತಿಯಿಂದ ಕಾಣುವ ಮನೋಭಾವ ಇವೆಲ್ಲವುಗಳಿಂದ ಭರತ ಮೇರು ವ್ಯಕ್ತಿತ್ವದವನೆಂದು ಬಿಂಬಿತನಾಗಿದ್ದಾನೆ.

ಯಾರೇ ಆಗಲಿ ಬದುಕಿನಲ್ಲಿ ಯಾವುದರ ಬಗ್ಗೆ ಕೂಡ ಅತಿಯಾದ ಮೋಹವಿಟ್ಟುಕೊಂಡಿರಬಾರದು. ಅಂಟಿಕೊಂಡಿರಬಾರದು ಇದ್ದೂ ಇಲ್ಲದಂತಿರಬೇಕು. ತಾವರೆಯ ಎಲೆಯ ಮೇಲಿನ ಜಲಬಿಂದುವಿನಂತಿರಬೇಕೆಂಬ ಸಂದೇಶವನ್ನು ರತ್ನಾಕರ ಭರತೇಶನ ಪಾತ್ರದ ಮೂಲಕ ನೀಡಿದ್ದಾನೆ ಭೋಗ ಅತಿಯಾದರೆ ರೋಗ ಆದ್ದರಿಂದ ಭೋಗದೊಂದಿಗೆ ಯೋಗವಿದ್ದರೆ ಅದು ಸಮತೋಲನಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ಸತ್ಯವನ್ನು ಮನವರಿಕೆ ಮಾಡಿಕೊಟ್ಟಿದ್ದಾನೆ.

ಈಗ ಇಲ್ಲಿ ಬಹುಮುಖವಾಗಿ ಗುರುತಿಸಬಹುದಾದ ಅಂಶವೆಂದರೆ ಭರತೇಶನ ಸಂಯಮ. ಭರತೇಶನ ಸಂಯಮದ ಬಗ್ಗೆ ತಿಳಿದುಕೊಳ್ಳುವ ಪೂರ್ವದಲ್ಲಿ ಸಂಯಮ ಎಂದರೇನು, ಸಂಯಮದ ಬಗ್ಗೆ ಪಂಪ, ವಚನಕಾರರು, ಕೀರ್ತನೆಕಾರರು ಯಾವ ಅಭಿಪ್ರಾಯ ಹೊಂದಿದ್ದರು ಎಂಬುದನ್ನು ಸ್ಪಷ್ಟಪಡಿಸಿಕೊಂಡರೆ ಭರತನ ಸಂಯಮಕ್ಕೊಂದು ಮಹತ್ವ ಬಂದೀತು.

ಸಂಯಮ ಎಂದರೆ ತಾಳ್ಮೆ, ಸಹನೆ, ಸಮಾಧಾನ. ಸಹಿಸು, ಎಂಬ ಹಲವು ಅರ್ಥಗಳಿರುವುದನ್ನು ಗುರುತಿಸಬಹುದು. ತಾಳಿದವನು ಬಾಳಿಯಾನು ಎಂಬ ಮಾತನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು.ತಾಳ್ಮೆ ಇಲ್ಲದಿದ್ದರೆ ಬದುಕಿನಲ್ಲಿ ದ್ವೇಷ ಅಸೂಯೆ, ಕೋಪ, ಸ್ವಾರ್ಥ ಹೆಚ್ಚಾಗಿ ಜೀವನ ಅಸಹನೀಯವಾಗುತ್ತದೆ. ಅವಸರ ಮಾಡಿದರೆ ಅಪಘಾತ ಅಥವಾ ಅನಾಹುತಕ್ಕೆ ಆಹ್ವಾನ ನೀಡಿದಂತೆಯೇ ಸರಿ. ಅವಸರ ಮಾಡಿ ಕೆಲವರು ಅಪಮಾನಕ್ಕೆ ಒಳಗಾದ ಪ್ರಸಂಗವೂ ಇದೆ. ಅಂಥ ಒಂದು ಪ್ರಸಂಗವನ್ನು ಪಂಪನ ಪಂಪಭಾರತದಲ್ಲಿ ಗಮನಿಸಬಹುದು. ಭೀಷ್ಮಾಚಾರ್ಯರಿಗೆ ದುರ್ಯೋಧನ ಸೇನಾಧಿಪತಿ ಪಟ್ಟವನ್ನು ಕಟ್ಟಿ ಬೀಗುತ್ತಿರುವಾಗ ಕರ್ಣ ಅಸಹನೆಯಿಂದ ವಿರೋಧಿಸುತ್ತಾನೆ. ಅಯ್ಯೋ ದುರ್ಯೋಧನ ಕಣ್ಣು ಕಾಣದ ಮುದುಕರಾದ ಭೀಷ್ಮರಿಗೆ ಕಟ್ಟಿದ ಪಟ್ಟ ಹುಲ್ಲಿನ ಹಗ್ಗಕ್ಕೆ ಸಮ, ಹಿಡಿದ ಬಿಲ್ಲು ದಂಟಿಗೆ ಸಮಾನ. ಶತ್ರುಗಳ ನಿಡಿದಾದ ಎಲುಬನ್ನು ಪುಡಿ ಮಾಡುವ ಇಚ್ಛೆ ನಿನಗಿದ್ದರೆ ನನಗೆ ಪಟ್ಟ ಕಟ್ಟು ಎನ್ನುತ್ತಾನೆ. ಆಗ ದ್ರೋಣರು ಕರ್ಣನಿಗೆ ತುಂಬಿದ ಸಭೆಯಲ್ಲಿ ಶ್ರೇಷ್ಠರಾದ ಭೀಷ್ಮರನ್ನು ಅವಹೇಳನ ಮಾಡಿದ್ದು ನಿನ್ನ ಕುಲವನ್ನು ತಿಳಿಸುತ್ತದೆ ಎಂದು ಹೇಳುತ್ತಾರೆ ಆಗಲೂ ಕರ್ಣ ಸಂಯಮ ಕಳೆದುಕೊಂಡು ಕೆರಳುತ್ತಾನೆ. ನಿಜ ಅರ್ಥದಲ್ಲಿ ಕಾಲವೆಂದರೆ ಪರಾಕ್ರಮ, ಸತ್ಯ, ತ್ಯಾಗ ಎನ್ನುತ್ತಾರೆ

ಆದರೆ ಭೀಷ್ಮರು ಕಿಂಚಿತ್ತೂ ಕೋಪಿಸಿಕೊಳ್ಳದೆ ಸಂಯಮದಿಂದ ವರ್ತಿಸಿ ಎಲ್ಲರಿಗಿಂತ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾರೆ. ಎಲ್ಲರ ಮಾತನ್ನು ಸಮಾಧಾನ ಚಿತ್ತದಿಂದ ಆಲಿಸಿ ಕರ್ಣನನ್ನು ಕುರಿತು ಕರ್ಣ, ಎಲ್ಲವೂ ನೀನು ಹೇಳಿದಂತೆ ನಿಜ. ಆದರೆ ನಿನ್ನಲ್ಲಿರುವ ಉತ್ಸಾಹ, ಯಾವ್ವನದ ಮದ, ಪರಾಕ್ರಮ, ಸ್ವಾಮಿನಿಷ್ಠೆ ನನ್ನಲ್ಲಿಲ್ಲ. ಆದರೆ ಇದು ಮಹಾಭಾರತ ಯುದ್ಧ ಎಲ್ಲರೂ ಸರದಿಯನ್ನು ಪಡೆಯಬೇಕಾಗುತ್ತದೆ ಅದಕ್ಕೆ ಆತುರವೇಕೆ? ಪ್ರತಿ ಘಟನೆ ಏಕೆ ಎಂದು ಹೇಳಿ ಕರ್ಣನ ಬಾಯಿ ಮುಚ್ಚಿಸುತ್ತಾರೆ. ಕರ್ಣ ಸಂಯಮ ಮೀರಿ ಎಲ್ಲರಿಂದ ಅಪಮಾನಿತನಾಗುತ್ತಾನೆ ಹಾಗೆಯೇ ಭೀಷ್ಮರು ಸಂಯಮದ ಗುಣದಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿ ಗೌರವವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತಾರೆ.

ರನ್ನನು ಗದಾಯುದ್ಧದಲ್ಲಿ ದುರ್ಯೋಧನನ ಪಾತ್ರದ ಮೂಲಕ ಸಂಯಮದ ಪ್ರಾಮುಖ್ಯತೆಯನ್ನು ತಿಳಿಸುತ್ತಾನೆ. ಪಾಂಡವರಿಗೆ ಸೂಜಿಯ ಮೊನೆಯಷ್ಟು ಜಾಗ ಕೊಡುವುದಿಲ್ಲ ಬೇಕಾದರೆ ಅವರು ಯುದ್ಧಮಾಡಿ ಭೂಮಿಯನ್ನು ಪಡೆಯಲಿ ನಾನು ಈ ಭೂಮಿಗಾಗಿ ಹೋರಾಡುತ್ತಿಲ್ಲ ನನ್ನ ಛಲಕ್ಕಾಗಿ ಹೋರಾಡುವೆ ಎಂದು ಆರ್ಭಟಿಸಿ, ಯುದ್ಧಭೂಮಿಯಲ್ಲಿ ಶವವಾಗಿ ಬಿದ್ದಿದ್ದ ತನ್ನ ಮಗ ಲಕ್ಷಣಕುಮಾರ, ಸಹೋದರ ದುಶ್ಯಾಸನ. ಮಿತ್ರ ಕರ್ಣರನ್ನು ನೋಡಿದಾಗ ಯುದ್ಧೋತ್ಸಾಹ ಜಾರಿ ಮಕ್ಕಳಂತೆ ಕಂಬನಿ ಮಿಡಿಯುತ್ತಾನೆ ರಾಜನಾದವನು ದುಃಖವಾಗಲಿ ಅಥವಾ ಅತೀ ಸಂತೋಷವಾಗಲಿ ತನ್ನ ಸಂಯಮದ ಎಲ್ಲೆಯನ್ನು ಮೀರಬಾರದೆಂದು ನಿಯಮವಿದ್ದರೂ ಹಾಗೆ ನಡೆದುಕೊಳ್ಳುವುದಿಲ್ಲ. ದುಃಖ ಅಥವಾ ಸಂತೋಷವನ್ನು ಸಮಾನವಾಗಿ ಸ್ವೀಕರಿಸುವುದೇ ಸಂಯಮ. ದುರ್ಯೋಧನ ಸಂಯಮದಿಂದ ಹಿರಿಯರ ನುಡಿಯನ್ನು ಆಲಿಸಿದ್ದರೆ ತನ್ನ ಒಡಹುಟ್ಟಿದವರನ್ನು ಬಂಧು ಬಳಗದವರನ್ನು ಕಳೆದುಕೊಳ್ಳದೆ ಸಮಸ್ತ ಭೂಮಂಡಲದ ಅಧಿಪತಿಯಾಗಿ ಆಡಳಿತ ನಡೆಸಬಹುದಿತ್ತು. ಸಂಯಮದ ಅಭಾವದಿಂದಲೇ ಕೌರವರು ನಾಶವಾದದ್ದು.

ಹಾಗೆಯೇ ಕನ್ನಡದ ಮೊದಲ ಕವಯಿತ್ರಿ ಎಂಬ ಹಿರಿಮೆಗೆ ಪಾತ್ರಳಾದ ಅಕ್ಕ ಮಹಾದೇವಿ ಕೂಡ ತನ್ನ ಒಂದು ವಚನದಲ್ಲಿ ಸಂಯಮ ಎಷ್ಟು ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಡುತ್ತಾಳೆ.

**ಬೆಟ್ಟದಾ ಮೇಲೊಂದು ಮನೆಯ ಮಾಡಿ**
**ಮೃಗಗಳಿಗೆ ಅಂಜಿದೊಡೆಂತಯ್ಯಾ.....**
**ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ - ನಿಂದೆಗಳು**
**ಬಂದಡೆ ಮನದಲ್ಲಿ ಕೋಪವ**
**ತಾಳದೆ ಸಮಾಧಾನಿಯಾಗಿರಬೇಕು.**

ಬೆಟ್ಟದಲ್ಲಿ ಮೃಗ, ಸಮುದ್ರದಲ್ಲಿ ನೊರೆತೆರೆ, ಸಂತೆಯಲ್ಲಿ ಶಬ್ದ ಸಹಜ. ಅವುಗಳಿಗೆ ಹೆದರಿದರೆ ಹೇಗೆ? ಅದರಂತೆಯೇ ಲೋಕದಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಹೊಗಳಿಕೆ ತೆಗಳಿಕೆ ಅನಿವಾರ್ಯ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕೋಪಿಸಿಕೊಳ್ಳದೆ ಮನಸ್ಸನ್ನು ಸ್ಥಿರವಾಗಿಟ್ಟುಕೊಂಡರೆ ಅಂದರೆ ಸಮಾಧಾನಿಯಾಗಿದ್ದರೆ ಯಾವುದೇ ಕೆಡುಕಾಗುವುದಿಲ್ಲ ಅದೇ ಬದುಕಿನ ನಿಜವಾದ ಜಯ.

ಅದಕ್ಕೆಂದೆ ಕನಕದಾಸರು ತಮ್ಮ ಒಂದು ಕೀರ್ತನೆಯಲ್ಲಿ

**"ತಲ್ಲಣಿಸದಿರು ಕಂಡ್ಯ**
**ತಾಳು ಮನವೇ**
**ಎಲ್ಲರನು ಸಲಹುವನು"**

ಇದಕೆ ಸಂಶಯವಿಲ್ಲ ಎಂದು ಹೇಳಿ ಜಗದ ತಲ್ಲಣಗಳಿಗೆ ಸಮಾಧಾನ (ಸಂಯಮ) ಒಂದೇ ಪರಿಹಾರ ಎಂದಿದ್ದಾರೆ.

ಸಂಯಮದಿಂದ ವ್ಯಕ್ತಿ ದೊಡ್ಡವನೆನಿಸುತ್ತಾನೆ ಎಂಬುದಕ್ಕೆ ಭರತೇಶ ವೈಭವ ಕೃತಿಯಲ್ಲಿನ ಭರತನೇ ಉತ್ತಮ ನಿದರ್ಶನ. ಪತ್ನಿಯರ ಸನಿಹದಲ್ಲಿದ್ದರೂ ಸಂಯಮ ಮೀರದ ಭರತ ಬಾಹುಬಲಿಯನ್ನು ಧರ್ಮಯುದ್ಧದ ಮೂಲಕ ಗೆಲ್ಲುತ್ತಾನೆ. ಸಂಯಮ ಶೀಲತೆಯಿಂದ ಭರತನಾಡಿದ ಮಾತಿಗೆ ಬಾಹುಬಲಿ ನಾಚಿ ತಲೆತಗ್ಗಿಸಿ ತಪಸ್ಸಿಗೆ ತೆರಳುತ್ತಾನೆ. ಸಂಯಮದ ಮಾತಿನ ಮೂಲಕ ಸಮಸ್ಯೆ ಯನ್ನು ಪರಿಹರಿಸುವ ಚಾತುರ್ಯ ಭರತನಲ್ಲಿದೆ. ಭರತ ಸಂಯಮ ಅರಿತವನು, ಮಾತು ಬಲ್ಲವನು. ಭರತನ ಸಂಯಮದ ಮಾತಿನ ವಶೀಕರಣಕ್ಕೆ ಬಾಹುಬಲಿ ಸೋಲುವುದು ಸಂಯಮದ ಶಕ್ತಿಯನ್ನು ಸಾರುತ್ತದೆ. ಗರುಡ ಮಂತ್ರದಿಂದ ಹಾವಿನ ವಿಷವಿಳಿಯುವಂತೆ ಬಾಹುಬಲಿಯ ಮನಸ್ಸಿನಲ್ಲಿಯ ದ್ವೇಷ, ಅಸೂಯೆ, ಸಿಟ್ಟನ್ನು ಮಾಯ ಮಾಡುತ್ತದೆ. ನಾನು ಪಾಪಿ ಅಣ್ಣನಿಗೆ ಇದಿರಾಗಿ ಕುಲಕ್ಕೆ ಲೋಕಾಪವಾದವನ್ನು ತಂದದ್ದು, ಕೋಪ - ಗರ್ವಗಳು ಯಾರನ್ನಾದರೂ ಕೆಡಿಸಬಲ್ಲವು ಎಂದು ಶರಣಾಗತನಾಗುವುದು ಸಂಯಮದ ಶಕ್ತಿಯಿಲ್ಲದೇ ಬೇರೇನೂ ಅಲ್ಲ.

ಹಾಗೆಯೇ ಭರತನ ಸಂಯಮ' ಪುತ್ರವಿಯೋಗ ಸಂಧಿ' ಯಲ್ಲಿ ಮತ್ತಷ್ಟು ಪ್ರಕಾಶಮಾನವಾಗಿ ಗೋಚರಿಸುತ್ತದೆ. ಯಾರಿಗೆ ಆಗಲಿ ಮಕ್ಕಳು ತಮ್ಮ ನಂತರ ಉತ್ತರಾಧಿಕಾರಿಗಳಾಗಿರಬೇಕೆಂಬ, ತಮ್ಮ ಸಮಸ್ತ ರಾಜ್ಯ, ಆಸ್ತಿಯನ್ನು ಪರಿಪಾಲಿಸಿಕೊಂಡು ಹೋಗಬೇಕೆಂಬ ಹಂಬಲ ಇದ್ದೇ ಇರುತ್ತದೆ. ಪುತ್ರಶೋಕ ನಿರಂತರಂ ನಿರಂತರಂ ಎಂಬ ಮಾತೊಂದಿದೆ ಪುತ್ರಶೋಕ ತಂದೆ ಎನಿಸಿಕೊಂಡವನಿಗೆ ದೊಡ್ಡ ನೋವು ಅದು ನಿರಂತರ.

ತನ್ನ ಉತ್ತರಾಧಿಕಾರಿಗಳಾಗಿ, ರಾಜ್ಯ ಪರಿಪಾಲನೆ ಮಾಡಬೇಕಾದ ಪುತ್ರರು ದೀಕ್ಷೆ ಕೈಗೊಂಡು ತಪಸ್ಸಿಗೆ ಹೊರಟು ಹೋದರೆಂಬ ವಿಚಾರ ತಿಳಿದು ಕೂಡ ಸಂಯಮ ಮೀರದೆ ಗಂಭೀರತೆಯನ್ನು

ಕಾಯ್ದುಕೊಂಡ ಭರತ ನಿಜವಾಗಿ ಆದರ್ಶವ್ಯಕ್ತಿ ಎನಿಸುತ್ತಾನೆ.

ಕಂಬನಿಗರೆದು, ತಲೆ ಬಾಗಿ ನಿಂತಿದ್ದ ಸೇವಕರ ದುಃಖದ ವದನವನ್ನು ಗಮನಿಸಿದ ಭರತ ಏನೆಂದು ಕೇಳುವ ಮೊದಲೇ ನೂರು ಮಂದಿ ಅರಸುಕುಮಾರರು ದೀಕ್ಷೆಯನ್ನು ಪಡೆದರೆಂಬ ಸುದ್ದಿ ಪ್ರಕಟಗೊಂಡಿತು. ಚಕ್ರಿಯ ಕೈಯಲ್ಲಿದ್ದ ವೀಳೆಯದೆಲೆ ಕೆಳಕ್ಕೆ ಬಿದ್ದಿತು. ಅವರ ಎದೆಯಲ್ಲಿ ಖಡ್ಗ ಬೀಸಿದಂತಾಯಿತು. ಉಸ್ಸೆಂದು ನೀಳವಾದ ಉಸಿರು ಬಿಟ್ಟನು. ಕಣ್ಣಳಲ್ಲಿ ನೀರು ತುಂಬಿಕೊಂಡಿತು, ಮಕ್ಕಳ ಮೇಲಿನ ವ್ಯಾಮೋಹ ಹೆಚ್ಚಿನದು ದಿಟ ಆದರೆ ಅವರು ಕೈ ಮಿಕ್ಕ ಮೇಲೆ ಏನೂ ಪ್ರಯೋಜನವಿಲ್ಲ. ಇನ್ನೂ ಶೋಕಿಸಿದಲ್ಲಿ ಅದೊಂದು ಮಕ್ಕಳಾಟಿಕೆಯಾದೀತೆಂದು ಎಣಿಸಿ ಶೋಕವನ್ನು ನೂಕಿ ನಿಂತನು. ಒಂದೆರಡು ಗಳಿಗೆಯ ಮೇಲೆ ಸಂತೈಸಿಕೊಂಡು, ಜಿನಸಿದ್ದ ಗುರು ಹಂಸನಾಥನೊಬ್ಬನೆ ಬಲ್ಲವನು ಅವರ ಸಾಹಸವನ್ನು ಎಂದುಕೊಂಡನು. ತಾನೆಸಗಿದ ಹಿಂದಿನ ಕರ್ಮದ ಫಲ ಇದಾಗಿದೆ ಎಂದುಕೊಂಡ. ಅಷ್ಟರಲ್ಲಿ ಸುದ್ದಿಯು ಹೆಂಗಸರ ಕಿವಿಗೂ ಬಿದ್ದಿತ್ತು. ಅವರು ಕಡು ದುಃಖದಿಂದ ತಪ್ತರಾಗಿ ಕಂದಿದ ಮುಖದಿಂದ ಕಂಬನಿಗರೆಯುತ್ತ ಬಂದು ಚಕ್ರಿಯ ಪಾದಗಳಿಗೆರಗಿದರು. ಕ್ಷೋಣೀಶ ನಮಗಿನ್ನೇನು ಗತಿಯೆಂದು ಎದೆ ಬಿರಿದರು.

ಸಲಹಿದವರು ಫಲವನ್ನು ಕಂಡೆವಿನ್ನು ಎಂದು ಎಣಿಸುವ ವೇಳೆಗೆ ವೃಕ್ಷವೇ ಒಣಗಿದಂತಾಯಿತೆಂದು ಮರುಗಿದರು. ಅವರಿಗೂ ತಿಳಿಸದೆ. ನೃಪನಿಗೂ ಹೇಳದೆ ತಪಸ್ಸಿಗೆ ತಾವು ಸುಮ್ಮನೆ ಹೋಗುವಂತಹ ನೋವನ್ನು ಕುವರರ ಮನಸ್ಸಿಗೆ ತಾವೇನು ಮಾಡಿದೆವೆಂದು ಗೋಳಾಡಿದರು. ಅದಕ್ಕೆ ಭರತನು ಸಮಾಧಾನದಿಂದಲೇ ದುಃಖವನ್ನು ನುಂಗಿಕೊಂಡು, ಕರ್ಮವನ್ನು ಮೀರುವವರು ಯಾರೂ ಇಲ್ಲ. ಅಂದರೆ ಜೀವನದಲ್ಲಿ ಏನು ಎದುರಾಗುವುದೋ ಅದನ್ನು ಎದುರಿಸಲೇಬೇಕು. ಅಲ್ಲದೆ ಕೈಮೀರಿ ಹೋದ ಬಳಿಕ ದುಃಖಿಸಿ ಪ್ರಯೋಜನವಿಲ್ಲ. ಮರುಗಿದರೆ ಅವರು ಮರಳಿ ಬರುವುದಿಲ್ಲ ಹೀಗೆ ಭರತ ಸಂಯಮ ತಾಳಿ ತನ್ನ ಅರಸಿಯರ ಮನಕ್ಕೆ ತಂಪನ್ನು ಸೂಸುವ ನುಡಿಗಳನ್ನು ಹೀಗೆ ಆಡಿದನು. "ಕುವರರು ಈಗ ಪನ್ನಗರು ಅಮರರು, ನರಲೋಕದವರೆಲ್ಲರೂ ಎರಗುವಂಥಾ ಉನ್ನತಿಯನ್ನು ಪಡೆದಿದ್ದಾರೆ. ನಿಮಗೆ ಒಬ್ಬೊಬ್ಬ ಮಗನನ್ನು ಕಳೆದುಕೊಂಡ ದುಃಖ, ನನಗೆ ಒಟ್ಟಿಗೆ ನೂರು ಮಂದಿ ಪುತ್ರರನ್ನು ಕಳೆದುಕೊಂಡ ದುಃಖ, ನಾನು ಹೇಗೆ ಸಹಿಸಿಕೊಳ್ಳಬೇಕು. ಮಕ್ಕಳು ಅಗಲಿದರೇನಾಯಿತು, ನನ್ನನ್ನು ಚೊಕ್ಕದಿಂದ ಬಜಿಸಿಕೊಂಡಿರಿ ಮಕ್ಕಳನ್ನು ಕೊಡುವೆನು. ಮಕ್ಕಳಿಲ್ಲದಂತಾಯಿತೆಂದು ನೀವೇನು ಮರುಗದಿರಿ".

ಭರತ ಚಕ್ರಿಯಾಡಿದ ಮಾತು ಕೇಳಿ ಅರಸಿಯರು ಮುಖವನ್ನು ಒರೆ ಮಾಡಿಕೊಂಡು ನಕ್ಕರು.: ಓ... ದೇವ, ನೀನೀಗ ಅಳುವವರ ನಗಿಸಿದೆ' ಎಂದರು. ಭರತನು ಅರಸಿಯರ ದುಃಖವನ್ನು ಅಳೆಯಬಲ್ಲವನು, ಇನ್ನೊಬ್ಬರ ದುಃಖವನ್ನು ಅಳೆಯಬಲ್ಲ ಸಾಮರ್ಥ್ಯ ಹೊಂದಿದವನು. ದುಃಖವನ್ನು ನಿವಾರಿಸಿಕೊಂಡು ಸಮಚಿತ್ತದಿಂದ ಇರಲು ಸಾಧ್ಯವಾಗುವುದೇ ಸಂಯಮ ದ ಬಲದಿಂದ ಎಂಬುದನ್ನು ಗಮನಿಸಬೇಕು.

ಪ್ರಕೃತಿಯನ್ನು ನೋಡಿ ಮನುಷ್ಯ ಕಲಿಯಬೇಕಾಗಿದೆ. ಪ್ರಕೃತಿಯಲ್ಲಿ ಪ್ರತಿಯೊಂದು ಕಾರ್ಯಚಟುವಟಿಕೆಯೂ ಕೂಡ ಯಾವುದೇ ಸದ್ದು,ಗದ್ದಲ ಆರ್ಭಟ ಆಡಂಬರದ ಪ್ರದರ್ಶನವಿಲ್ಲದೇ ನಡೆಯುವುದು ಹಾಗೆಯೇ ಭರತನು ಚಕ್ರಿಯಾಗಿದ್ದರೂ ಕೂಡ ಅಹಂಕಾರ, ಸ್ವಾರ್ಥ ದ್ವೇಷ ಅಸೂಯೆ ಎಂಬ ಹೀನ ಗುಣಗಳನ್ನು ಬದಿಗಿಟ್ಟು ಪ್ರೀತಿ ಶಾಂತಿ, ನಿಸ್ವಾರ್ಥತೆ ಮತ್ತು ಸಹನೆಯಿಂದ ತನ್ನ ಹೊಣೆಗಾರಿಕೆಯನ್ನು ಸಮಚಿತ್ತ ಭಾವದಿಂದ ನಿರ್ವಹಿಸುತ್ತಿದ್ದ. ಯೋಗಿಯೊಬ್ಬನಿಗೆ ಮಾತ್ರ ಸಾಧ್ಯವಾದ ಈ ಕಾರ್ಯ ಭರತನಿಗೆ ಹೇಗೆ ಸಾಧ್ಯವಾಯಿತು ಎಂದು ಪ್ರಶ್ನೆ ಮಾಡಿಕೊಂಡರೆ ಭರತನು ಚಕ್ರಿಯೂ ಹೌದು ಹಾಗೆಯೇ ಅವನೊಳಗೊಬ್ಬ ಯೋಗಿ ಸದಾ ಜಾಗೃತನಾಗಿ ಅವನನ್ನು ಎಚ್ಚರಿಸುತ್ತಿದ್ದ. ಭರತನಿಗೆ ಚೆನ್ನಾಗಿ ಗೊತ್ತು ಯಾವು ಶಾಶ್ವತವಲ್ಲ. ಇರುವ ಬದುಕನ್ನು ಸಂಯಮದಿಂದ ಕಳೆಯಬೇಕೆಂಬ ಪ್ರಜ್ಞೆಯಿಂದ ಎಂದೂ ಹದ್ದುಮೀರಿ ವರ್ತಿಸಲಿಲ್ಲ. ಗರ್ವ, ಸದ್ದು-ಗದ್ದಲ ಹಾರಾಟ - ತೂರಾಟ ಬಡಿದಾಟದಿಂದ ಅಂತಿಮವಾಗಿ ಆಗುವ ಪ್ರಯೋಜನವಾದರೂ ಏನು? ಪ್ರತಿಯೊಬ್ಬರೂ ತಮ್ಮನ್ನು ತಾವು ಆತ್ಮವಿಮರ್ಶೆ ಮಾಡಿಕೊಂಡರೆ, ಹುಡುಕಿಕೊಂಡರೆ ಭರತ ಚಕ್ರಿಯ ಸಂಯಮದ ಸಮಭಾವ-ಸಮತೂಕದ ರಹಸ್ಯ ಮನವರಿಕೆಯಾಗದೇ ಇರದು.

**ಉಲ್ಲೇಖಗಳು**


1. ಪಂಪಭಾರತ ದೀಪಿಕೆ- ಡಾ.ಡಿ.ಎಲ್ ನರಸಿಂಹಾಚಾರ್, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು-2012.
2. ವಾಣಿಜ್ಯಸೌರಭ ೧- ಪ್ರೊ ಶಿವಾನಂದ ಕೆಳಗಿನಮನಿ, ಕುವೆಂಪು ವಿವಿ ಪಕಾಕ ಅಧ್ಯಾಪಕರ ವೇದಿಕೆ,2024.
3. ಗಣಕ ಸಿರಿ ೧-ಶಿವಾನಂದ ಕೆಳಗಿನಮನಿ, ಕುವೆಂಪು ವಿವಿ ಪಕಾ ಕನ್ನಡ ಅಧ್ಯಾಪಕರ ವೇದಿಕೆ,2024.
4. ವಿಜ್ಞಾನ ಗಂಗೋತ್ರಿ - ಪ್ರೊ ಸೋಮಣ್ಣ ಪ್ರಸಾರಾಂಗ ಮಂಗಳೂರು ವಿವಿ-2022.
5. ನುಡಿ ಶಿಲ್ಪ - ಪ್ರೊ ಬಿ ಶಿವರಾಮಶೆಟ್ಟಿ ಪ್ರಸಾರಾಂಗ ಮಂಗಳೂರು ವಿವಿ-2017.
6. ರತ್ನಾಕರ ಶತಕ - ಡಾ.ಎಚ್ ಪಿ ಮೋಹನಕುಮಾರ ಶಾಸ್ತ್ರಿ, ಆಚಾರ್ಯ ವಿಷನ್, ಗುರುಕುಲ ಎಡು ಸರ್ವಿಸ್, ಮೈಸೂರು-2020.

7. ರತ್ನಾಕರವರ್ಣಿ ಮತ್ತು ಅವನ ಕೃತಿಗಳು - ಡಾ. ಎಸ್. ವಿ ಸುಜಾತ ಪ್ರಸಾರಾಂಗ, ಕನ್ನಡ ವಿವಿ ಹಂಪಿ-2017.
8. ಭರತೇಶ ವೈಭವ - ವಸಿಷ್ಠ - ಚೇತನ ಬುಕ್ ಹೌಸ್ ಮೈಸೂರು-2014.
9. ಭರತೇಶ ವೈಭವ: ಜಿಜ್ಞಾಸೆ - ಪ್ರೊ ಸೋಮಣ್ಣ, ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ ಮಂಗಳೂರು ವಿವಿ-2022.
10. ರತ್ನಾಕರವರ್ಣಿ - ಭರತೇಶ ವೈಭವ: ಅವಲೋಕನ - ಪ್ರೊ ಸೋಮಣ್ಣ, ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ-2022.

**Creative Commons (CC) License**
This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.